# ವಾರ್ಡ್ ಸಮಿತಿಗಳು ವಾರ್ಡ್ ಮಟ್ಟವನ್ನು ಘನ ತ್ಯಾಜ್ಯ ನಿರ್ವಹಣಾ ಯೋಜನೆಯ ಸಿದ್ಧತೆ ಖಚಿತಪಡಿಸಿಕೊಳ್ಳಲು ಕರ್ನಾಟಕ ಹೈಕೋರ್ಟ್ ನಿಂದ ಬಿಬಿಎಂಪಿಗೆ ಐತಿಹಾಸಿಕ ನಿರ್ದೇಶನ

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಶ್ರೀ ಬಿ ಎಸ್ ಪಾಟೀಲ್ ಮತ್ತು ನ್ಯಾಯಮೂರ್ತಿ ಶ್ರೀಮತಿ ಬಿ ವಿ ನಾಗರತ್ನರವರನ್ನು ಒಳಗೊಂಡ ವಿಭಾಗೀಯ ಪೀಠವು ನೀಡಿರುವ ಐತಿಹಾಸಿಕ ತೀರ್ಪಿನಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) 2017ರ ಅಕ್ಟೋಬರ್ 31ರಂದು ಎಲ್ಲಾ 198 ವಾರ್ಡುಗಳ ರಚಿಸಲಾಗಿರುವ ವಾರ್ಡ್ ಸಮಿತಿಗಳು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಶನ್ಸ್ ಆಕ್ಟ್ 1976ನ ಸೆಕ್ಷನ್ 13-ಎಚ್ ಅನ್ವಯ ಸಭೆ ಸೇರಬೇಕು ಎಂದು ನಿರ್ದೇಶನ ನೀಡಿದೆ. ಈ ಮೊದಲ ಸಭೆಯಲ್ಲಿ ಪ್ರತಿಯೊಂದು ವಾರ್ಡ್ ಸಮಿತಿಯು ಸೂಕ್ತ ರೀತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ ಮತ್ತು ನೈರ್ಮಲ್ಯ ಕೆಲಸವನ್ನು ಖಚಿತಪಡಿಸಿಕೊಳ್ಳಲು ಕಾಯಿದೆಯ ಸೆಕ್ಷನ್ 13 (ಐ) (ಐ) ಪ್ರಕಾರ ಹೊಸ ಸಾರ್ವಜನಿಕ ನೈರ್ಮಲ್ಯ ಘಟಕಗಳ ಸ್ಥಳವನ್ನು ಅಂತಿಮಗೊಳಿಸಲು ಒಂದು ವಾರ್ಡ್ ಮಟ್ಟದ ಯೋಜನೆಯನ್ನು ಸಿದ್ಧಪಡಿಸಬೇಕು ಎಂದು ನ್ಯಾಯಾಲಯವು ನಿರ್ದೇಶಿಸಿದೆ. ಈ ಯೋಜನೆಗಳನ್ನು ಕ್ರಿಯಾಶೀಲ ವರದಿ (ಎಟಿಆರ್) ಎಂದು ಬಿಬಿಎಂಪಿ ಏಕೀಕರಣಗೊಳಿಸಲಿದೆ ಮತ್ತು ತನ್ನ ವೆಬ್ ತಾಣದಲ್ಲಿ ಹಾಕಲಿದೆ. ಪ್ರಗತಿಗೆ ಸಂಬಂಧಿಸಿದ ವರದಿಯನ್ನು 2017 ರ ಡಿಸೆಂಬರ್ 8ರ ಮುಂದಿನ ವಿಚಾರಣೆಗೆ ಮುನ್ನ ನ್ಯಾಯಾಲಯದ ಮುಂದೆ ಇಡಲಾಗುವುದು.

ಬೆಂಗಳೂರಿನಂತಹ ಬೃಹತ್ ಮಹಾನಗರಪಾಲಿಕೆ ಕೇಂದ್ರಗಳ ಆಡಳಿತ ಮತ್ತು ನಿರ್ವಹಣೆಯು ನಿರಂತರವಾದ ಬಿಕ್ಕಟ್ಟಿನ ಸ್ಥಿತಿಯಲ್ಲಿರುವಾಗ ಈ ನಿರ್ದೇಶನವು ಬಹಳ ನಿರ್ಣಾಯಕವೆನಿಸಿದೆ. ಸಂವಿಧಾನಾತ್ಮಕ 74 ನೇ ತಿದ್ದುಪಡಿ (ನಗರ ಪಾಲಿಕಾ) ಕಾಯ್ದೆ 1992ರ ಪ್ರಕಾರ ನಾಗರಿಕ ವಿಷಯಗಳಲ್ಲಿ ನೇರ ಸಾರ್ವಜನಿಕ ಭಾಗವಹಿಸುವಿಕೆಯನ್ನು ಖಾತರಿಗೊಳಿಸುವ ಅಧಿಕಾರದ ವಿಕೇಂದ್ರೀಕರಣ ಮತ್ತು ಹಂಚಿಕೆಯ ಕೊರತೆಯ ನೇರ ಪರಿಣಾಮ ಇದಾಗಿದೆ. ಪೌರಾಡಳಿತದಲ್ಲಿ 25 ವರ್ಷಗಳ ಹಿಂದೆ ಪಾರದರ್ಶಕತೆ ಸುಧಾರಿಸುವುದು, ಹೊಣೆಗಾರಿಕೆ ಮತ್ತು ನಾಗರಿಕ ಆಡಳಿತದಲ್ಲಿನ ದಕ್ಷತೆಯ ಗುರಿಯನ್ನು ಇಟ್ಟುಕೊಂಡು ಆರಂಭಿಸಿದ ನಿರ್ಣಾಯಕ ಸುಧಾರಣೆಯ ವಿಳಂಬಕ್ಕೆ ಕಾರಣವಾಗಿದೆ. ಸಂಪೂರ್ಣ ಸನ್ನಿವೇಶವನ್ನು ಮತ್ತು ಸಂಬಂಧಿತ ಬಿಕ್ಕಟ್ಟನ್ನು ಅರ್ಥಮಾಡಿಕೊಂಡು, ಶ್ರೀ. ಲಿಯೋ ಎಫ್. ಸಲ್ಡಾನ್ಹಾ ಅವರು ಮಾಡಿರುವ ಅರ್ಜಿಗೆ ಪ್ರತಿಕ್ರಿಯೆಯಾಗಿ ಈ ನಿರ್ದೇಶನಗಳನ್ನು ಹೈಕೋರ್ಟ್ ನೀಡಿದೆ. W 46523/2012 (ಎನ್ವಿರಾನ್ಮೆಂಟ್ ಸಪೋರ್ಟ್ ಗ್ರೂಪ್ & ಇತರರು V/s ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ &

ಇತರರು WP 24739/2012 ಜೊತೆಗಿನ ಸಂಪರ್ಕದಲ್ಲಿ ಮತ್ತು ಜುಲೈ 2012 ರಿಂದ ಘನ ತ್ಯಾಜ್ಯ ನಿರ್ವಹಣೆ ಬಿಕ್ಕಟ್ಟುಗಳನ್ನು ನಿವಾರಿಸುವಲ್ಲಿ ನ್ಯಾಯಾಲಯದ ಮುಂದಿರುವ ಇತರ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಿಗೆ ಸಂಬಂಧಿಸಿ).

ಅಭೂತಪೂರ್ವ ಕ್ರಮವೊಂದರಲ್ಲಿ, ನ್ಯಾಯಾಲಯವು ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನಗಳು ಹೊಂದಿರುವ ಮತ್ತು ಪಾಲಿಕೆಯ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ಮತ್ತು ಕರ್ನಾಟಕ ಮಹಾನಗರ ಪಾಲಿಕೆ ಕಾಯ್ದೆ 1976ಗಳ ನಿರ್ದಿಷ್ಟ ಸೌಲಭ್ಯಗಳಿಗೆ ಅನುಗುಣವಾಗಿ ವಾರ್ಡ್ ಸಮಿತಿ ಕಾರ್ಯವೈಖರಿಗೆ ಸಂಬಂಧಿಸಿ ಕೈಪಿಡಿಯನ್ನು ಸಿದ್ಧಗೊಳಿಸಿ, 10 ದಿನಗಳಲ್ಲಿ ಪ್ರತೀ ವಾರ್ಡ್ ಸಮಿತಿಗೆ ತಲುಪಿಸುವಂತೆ ನಿರ್ದೇಶಿಸಿದೆ. ಸಮಿತಿಯು ನಂತರ ವಾರ್ಡ್ ಮಟ್ಟದ ತ್ಯಾಜ್ಯ ನಿರ್ವಹಣಾ ಯೋಜನೆಯನ್ನು ಆಧರಿಸಿದ ಮೈಕ್ರೋ ಯೋಜನೆಗಳನ್ನು ಅಭಿವೃದ್ಧಿಗೊಳಿಸಲು ಬಿಬಿಎಂಪಿಗೆ ನೆರವಾಗಲಿದೆ. ಇದಕ್ಕೆ ಮಾಹಿತಿ ಮತ್ತು ವಾಸ್ತವಾಂಶಗಳನ್ನು ಸಾರ್ವಜನಿಕರಿಂದ ಪಡೆದುಕೊಳ್ಳಲಾಗುವುದು.

ಹೈಕೋರ್ಟ್ ತನ್ನ ಹಿಂದಿನ ಆದೇಶಗಳಲ್ಲಿ ತಮ್ಮ ವಾರ್ಡ್ ಮಿತಿಗಳಲ್ಲಿ ತ್ಯಾಜ್ಯವನ್ನು ನಿರ್ವಹಿಸಲು ವಾರ್ಡ್ ಸಮಿತಿಗಳನ್ನು ಜವಾಬ್ದಾರರನ್ನಾಗಿ ಮಾಡಿದೆ. ಮುಖ್ಯವಾಗಿ, ಪ್ರತೀಯೊಂದು ವಾರ್ಡ್ ಮೂಲದಲ್ಲಿಯೇ ತ್ಯಾಜ್ಯವನ್ನು ಪ್ರತ್ಯೇಕಿಸದೆ ಇದ್ದಲ್ಲಿ, ಮತ್ತು ಎರಡು ತೇವಾಂಶ ತ್ಯಾಜ್ಯ ಮತ್ತು ಒಂದು ಒಣ ತ್ಯಾಜ್ಯ ಸಂಸ್ಕರಣಾ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ, ವಾರ್ಡ್ ಒಳಗೆ ಉತ್ಪನ್ನವಾದ ತ್ಯಾಜ್ಯವನ್ನು ನಿಭಾಯಿಸದೆ ಇದ್ದಲ್ಲಿ ತ್ಯಾಜ್ಯ ಬಿಕ್ಕಟ್ಟಿಗೆ ಯಾವುದೇ ಪರಿಹಾರವಿಲ್ಲ ಎಂದು ನ್ಯಾಯಾಲಯವು 2012ರ ನವೆಂಬರ್ ನಲ್ಲಿ ನೀಡಿದ ನಿರ್ದೇಶನಗಳಲ್ಲಿ ಹೇಳಿದೆ. ತ್ಯಾಜ್ಯವನ್ನು ಕ್ವಾರಿಗಳಲ್ಲಿ ಅಥವಾ ತ್ಯಾಜ್ಯ ಎಸೆಯುವ ಪ್ರಾಂತಗಳಿಗೆ ಸೇರಲು ನೂರಾರು ಮೈಲಿಗಳಷ್ಟು ಪ್ರಯಾಣಿಸದೆ ಇರಲಿ ಮತ್ತು ದುರದೃಷ್ಟವಶಾತ್ ನಗರದ ತ್ಯಾಜ್ಯದ ಬಲಿಪಶುಗಳಾಗುವ ಸಾವಿರಾರು ಗ್ರಾಮಸ್ಥರ ಜೀವನದಲ್ಲಿ ಸಮಸ್ಯೆ ಸೃಷ್ಟಿಸದೆ ಇರಲಿ ಎಂದು ಖಾತರಿಪಡಿಸುವ ಉದ್ದೇಶ ಇದಾಗಿದೆ.

ಮೂಲದಲ್ಲಿಯೇ ತ್ಯಾಜ್ಯವನ್ನು ಪ್ರತ್ಯೇಕಗೊಳಿಸುವುದು ಮತ್ತು ನಿರ್ವಹಣೆಗಾಗಿ ಗರಿಷ್ಠ ಪ್ರಯತ್ನವನ್ನು ಹಾಕಲಾಗಿದೆ ಎಂದು ಬಿಬಿಎಂಪಿಯ ಜಂಟಿ ಆಯುಕ್ತ ಶ್ರೀ ಸರ್ಫರಾಜ್ ಖಾನ್ (ಎಸ್ ಡಬ್ಲ್ಯು ಎಂ ಮತ್ತು ಆರೋಗ್ಯ) ಅವರು ವಿವರ ನೀಡಿದರು. ಆದರೆ, ಕೇವಲ ಶೇ. 40ರಷ್ಟು ತ್ಯಾಜ್ಯ ಪ್ರತ್ಯೇಕಿಸುವುದನ್ನು ಸಾಧಿಸಲಾಗಿದೆ. ಪ್ರಯತ್ನಗಳು ಮೂಲದಲ್ಲಿಯೇ ಪ್ರತ್ಯೇಕಿಸುವ ಮೂಲಕ ಗರಿಷ್ಠ ತ್ಯಾಜ್ಯ ನಿರ್ವಹಣೆಗೇ ಇದ್ದರೂ, ಮಧ್ಯಂತರ ಅಂದಾಜುಗಳು ತ್ಯಾಜ್ಯವನ್ನು ಕ್ವಾರಿಗಳಿಗೆ ಕೊಂಡೊಯ್ಯುವುದನ್ನು ಬೇಡಲಿವೆ. ಇದು ಸ್ಥಳೀಯರ ವಿರೋಧ ಮತ್ತು ವಿವಿಧ ಕಾರಣಗಳಿಂದ ಸಾಕಷ್ಟು ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸದೆ ಇರುವ ರು. 450 ಕೋಟಿಗಳಲ್ಲಿ ಸ್ಥಾಪಿಸಿದ ಎಂಟು ತ್ಯಾಜ್ಯ ಸಂಸ್ಕರಣಾ ತಾಣಗಳಿಗಾಗಿ ಆಗಿರುತ್ತದೆ.

ಈ ಮೊದಲು ಅರ್ಜಿದಾರರ ವಕೀಲರಾಗಿರುವ ಶ್ರೀ ಅಜೇಶ್ ಕುಮಾರ್, WP 24739/2012 ನಲ್ಲಿ ಘನ ತ್ಯಾಜ್ಯ ನಿರ್ವಹಣೆಗಾಗಿ ನೀಡಲಾಗಿರುವ ಹಲವು ಪ್ರಗತಿಪರ ನಿರ್ದೇಶನಗಳನ್ನು ಅನುಸರಿಸದೆ ಇರುವುದನ್ನು ಎಂದು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ. ಈ ನಿರ್ದೇಶನಗಳು ಮೂಲದಲ್ಲಿಯೇ ತ್ಯಾಜ್ಯ ಪ್ರತ್ಯೇಕಿಸುವುದು ಮತ್ತು ಸ್ಥಳೀಯ ಏರಿಯಾಗಳಲ್ಲಿ ಅದರ ನಿರ್ವಹಣೆಯ ಅಗತ್ಯವನ್ನು ತಿಳಿಸಿದೆ. ಫಲಿತಾಂಶವಾಗಿ, ಸಂಗ್ರಹಗೊಂಡ ಮಿಶ್ರ ತ್ಯಾಜ್ಯವನ್ನು ಕ್ವಾರಿ ಗುಂಡಿಗಳಲ್ಲಿ ಮತ್ತು ನಗರದ ಸುತ್ತಮತ್ತು ಎಸೆಯುವ ಕಾರಣದಿಂದ ವ್ಯಾಪಕ ಪರಿಸರ ಮತ್ತು ಆರೋಗ್ಯ ಪರಿಣಾಮಗಳು ಸ್ಥಳೀಯ ಗ್ರಾಮ ಸಮುದಾಯಗಳ ಮೇಲಾಗುತ್ತಿವೆ.

ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಒಬ್ಬ ಅರ್ಜಿದಾರರಾಗಿರುವ ಬೆಂಗಳೂರು ಸಿವಿಕ್ ಸಂಸ್ಥೆಯ  ಶ್ರೀಮತಿ ಕಾತ್ಯಾಯಿನಿ ಚಾಮರಾಜ್ ಅವರು ಈಗ ರಚಿಸಿದ ವಾರ್ಡ್ ಸಮಿತಿಗಳನ್ನು ಕಾನೂನು ಪ್ರಕಾರ ರಚಿಸಲಾಗಿಲ್ಲ ಎಂದು ವಾದ ಮಂಡಿಸಿದರು. ಅಂತಹ ಕಾನೂನಾತ್ಮಕ ಅಕ್ಷೇಪಣೆಗಳನ್ನು ಸ್ವತಂತ್ರವಾಗಿ ಎತ್ತಬಹುದು. ಆದರೆ, ಈಗಾಗಲೇ ರಚಿಸಲಾದ ವಾರ್ಡ್ ಸಮಿತಿಗಳು ಕಾರ್ಯಾರಂಭಿಸಬೇಕು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ ಮಾವಳ್ಳಿಪುರದ ತ್ಯಾಜ್ಯ ಸಂಗ್ರಹ ಪ್ರಾಂತದಲ್ಲಿ ಸಂಗ್ರಹಗೊಂಡಿರುವ ತ್ಯಾಜ್ಯದ ಬಯೋಮೈನಿಂಗ್ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮ ಮತ್ತು ಸ್ಥಳೀಯ ಸಮುದಾಯಗಳು ಎದುರಿಸುವ ಆರೋಗ್ಯ ಮತ್ತು ಪರಿಸರ ಸಮಸ್ಯೆಗಳ ಪರಿಹಾರಕ್ಕೆ ಹಾಕಲಾಗಿರುವ ಪ್ರಯುತ್ನಗಳ ಬಗ್ಗೆ ಮುಂದಿನ ವಿಚಾರಣೆ ದಿನ ವರದಿ ಸಲ್ಲಿಸುವಂತೆ ಗೌರವಾನ್ವಿತ ನ್ಯಾಯಾಲಯವು ಬಿಬಿಎಂಪಿಗೆ ನಿರ್ದೇಶನ ನೀಡಿದೆ. ನ್ಯಾಯಾಲಯದಲ್ಲಿ  ಎನ್ವಿರಾನ್ಮೆಟ್ ಸಪೋರ್ಟ್ ಗ್ರೂಪ್ ಸಲ್ಲಿಸಿದ ವರದಿ ***"ಬೆಂಗಳೂರಿನ ಘನ ತ್ಯಾಜ್ಯ ಪ್ರಾಂತಗಳು, ತ್ಯಾಜ್ಯ ಸಂಸ್ಕರಣಾ ಸ್ಥಳಗಳು ಮತ್ತು ಕಸ ಆರೋಗ್ಯ ಮತ್ತು ಪರಿಸರ ಪರಿಣಾಮಗಳು- ಮಾವಳ್ಳಿಪುರದ ತ್ಯಾಜ್ಯ ಸ್ಥಳದಲ್ಲಿ ನಿರಂತರವಾಗಿ ಮಾರಕ ಪರಿಣಾಮಗಳು"*** ಇದಕ್ಕೆ ಬಿಬಿಎಂಪಿ ತನ್ನ ವರದಿಯಲ್ಲಿ ವಿವರವಾಗಿ ಪ್ರತಿಕ್ರಿಯಿಸಬೇಕು ಎಂದೂ ನ್ಯಾಯಲಯ ನಿರ್ದೇಶನ ನೀಡಿದೆ.

**-ನಮ್ರತಾ ಕಾಬ್ರಾ, ಮಲ್ಲೇಶ್ ಕೆ ಆರ್ ಮತ್ತು ಹರ್ಷ ವರ್ಧನ್ ಭಾಟಿ- ಎನ್ವಿರಾನ್ಮೆಟ್ ಸಪೋರ್ಟ್ ಗ್ರೂಪ್, ಬೆಂಗಳೂರು.**

**(ಕನ್ನಡ ಅನುವಾದ:ಪುಷ್ಪ)**